# ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು ನಿಗಮ ನಿಯಮಿತ,ಮೈಸೂರು.

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನಿಗಮ ಕಛೇರಿ
ನಂ. 29, ವಿಜಯನಗರ 2ನೇ ಹಂತ,
ಚಾ.ವಿ.ಸ.ನಿ.ನಿ.,ಹಿನಕಲ್, ಮೈಸೂರು-570017
Web:www.cescmysore.org
IN:U40109KA2004SGC035177

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ).,
ಕಾ ಮತ್ತು ಪಾ, ಉಪ ವಿಭಾಗ ಚಾ.ವಿ.ಸ.ನಿ.ನಿ
ಬೆಟ್ಟದಪುರ-571102
ದೂರವಾಣಿ/ಫ್ಯಾಕ್ಸ್ ಸಂಖ್ಯೆ :08223-275464
ಇ ಮೇಲ್ ಸಂಖ್ಯೆ :aeecescbpura@gmail.com


ಕ್ರಮಾಂಕ:ಸ.ಕಾ.ನಿ.ಇಂ(ವಿ)/ಸ.ಇಂ(ತಾ)/ಸಸ್/ಜ.ಪು/2020-21/ 318(A) ದಿನಾಂಕ: 1-7-2020

## ಸಭೆ ನಡಾವಳಿಗಳು

ದಿನಾಂಕ 29.06.2020 ರಂದು ಮಧ್ಯಾಹ್ನ 3 ಗಂಟೆಗೆ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಚಾ.ವಿ.ಸ.ನಿ.ನಿ ಕೆ.ಆರ್. ನಗರ ರವರ ಅಧ್ಯಕ್ಷತೆಯಲ್ಲಿ ನಡೆದ ಬೆಟ್ಟದಪುರ ಕಾರ್ಯ ಮತ್ತು ಪಾಲನ ಉಪವಿಭಾಗದ ವ್ಯಾಪ್ತಿಯ ಜನ ಸಂಪರ್ಕ ಸಭೆಯ ನಡಾವಳಿಗಳು.

**ಸಭೆಯಲ್ಲಿ ಹಾಜರಿದ್ದವರು,**

1. ಶ್ರೀ ಚಂದ್ರಶೇಖರ್ ಬಿ.ಎಸ್, ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಚಾ.ವಿ.ಸ.ನಿ.ನಿ, ಕೆ.ಆರ್. ನಗರ.
2. ಶ್ರೀ ಕುಮಾರ್ ಸಿ. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನಾ ಉಪ ವಿಭಾಗ ಚಾ.ವಿ.ಸ.ನಿ. ಬೆಟ್ಟದಪುರ.
3. ಶ್ರೀ ರಾಜೇಶ್ ಪಿ, ಸಹಾಯಕ ಇಂಜಿನಿಯರ್ (ತಾಂ), ಕಾರ್ಯ ಮತ್ತು ಪಾಲನಾ ಉಪ ವಿಭಾಗ ಚಾ.ವಿ.ಸ.ನಿ.ನಿ ಬೆಟ್ಟದಪುರ.
4. ಶ್ರೀ ನವೀನ್ ವಿ.ಎನ್, ಹಿರಿಯ ಸಹಾಯಕ, ಕಾರ್ಯ ಮತ್ತು ಪಾಲನಾ ಉಪ ವಿಭಾಗ ಚಾವಿಸನಿನಿ, ಬೆಟ್ಟದಪುರ.
5. ಶ್ರೀ ಮಣಿಕಂಠ ಕೆ.ಬಿ, ಪ್ರಭಾರ ಕಿರಿಯ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನಾ ಶಾಖೆ, ಸೀಗೂರು.
6. ಶ್ರೀ ಪ್ರತಾಪ್, ಪ್ರಭಾರ ಕಿರಿಯ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನಾ ಶಾಖೆ, ಕಣಗಾಲು.
7. ಶ್ರೀ ಸೈಯದ್ ಮಹಮ್ಮದ್ ಗೌಸ್, ಕಿರಿಯ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನಾ ಶಾಖೆ, ರಾವಂದೂರು/ ಕಿತ್ತೂರು.

ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನಾ ವಿಭಾಗ ಚಾ.ವಿ.ಸ.ನಿ.ನಿ, ಕೆ.ಆರ್. ನಗರ ರವರು ಸಭೆಯಲ್ಲಿ ಹಾಜರಿದ್ದ ಗ್ರಾಹಕರಿಗೆ ಹಾಗೂ ಅಧಿಕಾರಿ/ನೌಕರರಿಗೆ ಸ್ವಾಗತಿಸಿದರು. ಸಭೆಯಲ್ಲಿ ಹಾಜರಿದ್ದ ಗ್ರಾಹಕರ ಸಲಹೆ/ದೂರುಗಳನ್ನು ಆಲಿಸಿ ಈ ಕೆಳಕಂಡಂತೆ ಕ್ರಮವನ್ನು ಕೈಗೊಳ್ಳಲಾಯಿತು.

| ಕ್ರ.ಸಂ | ಗ್ರಾಹಕರ ಹೆಸರು ಮತ್ತು ವಿಳಾಸ | ದಾಖಲಾದ ದೂರು/ಸಲಹೆಯ ವಿವರ | ಅನುಪಾಲನಾ ಕ್ರಮ |
|---|---|---|---|
| 1. | ಶ್ರೀ ನಿಂಗೇಗೌಡ ಹಿಟ್ನಹಳ್ಳಿ ಗ್ರಾಮ | ಶ್ರೀ ನಿಂಗೇಗೌಡ ಹಿಟ್ನಹಳ್ಳಿ ಗ್ರಾಮ ಅವರ ಮನೆ ಮುಂದೆ ಇರುವ ವಿದ್ಯುತ್ ಕಂಬದ ಮಳೆಯಿಂದ ಶಿಥಿಲಗೊಂಡು ವಾಲಿರುತ್ತದೆ ಎಂದು ತಿಳಿಸಿರುತ್ತಾರೆ | ಶಾಖಾಧಿಕಾರಿ ಸೀಗೂರು ರವರಿಗೆ ಸ್ಥಳ ಪರಿಶೀಲಿಸಿ ಕೂಡಲೇ ಕ್ರಮವನ್ನು ತೆಗೆದುಕೊಳ್ಳಲು ಸೂಚಿಸಲಾಯಿತು. |
| 2 | ಶ್ರೀ ರಮೇಶ್ ಭೋಗನಹಳ್ಳಿ ಗ್ರಾಮ | ಭೋಗನಹಳ್ಳಿ ಗ್ರಾಮದ 63 ಕೆ.ವಿ.ಎ ಐ.ಪಿ ಪರಿವರ್ತಕವು ವಿಫಲಗೊಂಡಿದ್ದು, ಇದನ್ನು ಬದಲಾಯಿಸಲು ಕೋರಿರುದರು | ಶಾಖಾಧಿಕಾರಿ ರಾವಂದೂರು ರವರಿಗೆ ವಿಫಲಗೊಂಡಿರುವ ಪರಿವರ್ತಕವನ್ನು ಬದಲಾಯಿಸಲು ಕ್ರಮವನ್ನು ತೆಗೆದುಕೊಳ್ಳಲು ಸೂಚಿಸಲಾಯಿತು. |

| | | | |
|---|---|---|---|
| 3 | ಶ್ರೀ ಚೆಲುವಯ್ಯ ಸಾಲುಕೊಪ್ಪಲು ಗ್ರಾಮ | ಸಾಲುಕೊಪ್ಪಲು ಗ್ರಾಮದ 63 ಕೆ.ವಿ.ಎ ಐ.ಪಿ ಪರಿವರ್ತಕವು ಪದೇ ಪದೇ ವಿಫಲಗೊಳ್ಳುತ್ತಿದ್ದು ಇದಕ್ಕೆ ಮತ್ತೊಂದು 25 ಕೆ.ವಿ.ಎ ಪರಿವರ್ತಕವನ್ನು ಅಳವಡಿಸಿಕೊಡುವಂತೆ ಕೇಳಿಕೊಂಡರು | ಶಾಖಾಧಿಕಾರಿ ಸೀಗೂರು ರವರು UNIP ಯೋಜನೆಯಡಿಯಲ್ಲಿ ಅಂದಾಜು ಪಟ್ಟಿ ತಯಾರಿಸಿ ವಿಭಾಗ ಕಛೇರಿಗೆ ಸಲ್ಲಿಸಿದ್ದು ಸದ್ಯದಲ್ಲೇ ಕಾಮಗಾರಿ ಆರಂಭಗೊಳ್ಳುವುದಾಗಿ ತಿಳಿಸಿದರು |
| 4 | ಶ್ರೀ ಮರೀಗೌಡರು ಕಿತ್ತೂರು ಗ್ರಾಮ | ಸದರಿಯವರ ಪರಿವರ್ತಕವು 25 ಕೆ.ವಿ.ಎ ಇದ್ದು ಅದರಲ್ಲಿ 7 ಸಂಖ್ಯೆಯ ಐ.ಪಿ ಸ್ಥಾವರಗಳು ಇದ್ದು ಅವರಿಗೆ 63 ಕೆ ವಿ ಎ ಪರಿವರ್ತಕವು ಬೇಕೆಂದು ಕೋರಿರುತ್ತಾರೆ. | ಶಾಖಾಧಿಕಾರಿ ಕಿತ್ತೂರು ರವರು UNIP ಯೋಜನೆಯಡಿಯಲ್ಲಿ ಅಂದಾಜು ಪಟ್ಟಿ ತಯಾರಿಸಿ ವಿಭಾಗ ಕಛೇರಿಗೆ ಸಲ್ಲಿಸಿದ್ದು ಸದ್ಯದಲ್ಲೇ ಕಾಮಗಾರಿ ಆರಂಭಗೊಳ್ಳುವುದಾಗಿ ತಿಳಿಸಿದರು |

ಸಭೆಯ ಕೊನೆಯಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ರವರು ವಿದ್ಯುತ್ ಗ್ರಾಹಕರಿಂದ ಕೇಳಿ ಬಂದಂತಹ ದೂರುಗಳು ಹಾಗೂ ಸಲಹೆಗಳ ಬಗ್ಗೆ ಸವಿವರವಾಗಿ ಮಾತನಾಡಿ ಸಭೆಯಲ್ಲಿಯೇ ಕೆಲವು ಅಹವಾಲುಗಳಿಗೆ ಸಂಭಂದಿಸಿದಂತೆ ಪರಿಹಾರ ಮಾರ್ಗೋಪಾಯಗಳನ್ನು ತಿಳಿಸಿ ಹಾಗೂ ಇತರೆ ಅಹವಾಲುಗಳಿಗೆ ಸಂಬಂಧಪಟ್ಟಂತೆ ಶಾಖಾಧಿಕಾರಿಗಳು ಸ್ಥಳ ಪರಿಶೀಲಿಸಿ ನಿಯಮಾನುಸಾರ ಕ್ರಮ ಕೈಗೊಂಡು ತೆಗೆದುಕೊಂಡ ಕ್ರಮದ ಬಗ್ಗೆ ಕಟ್ಟುನಿಟ್ಟಾಗಿ ಅನುಪಾಲನಾ ವರದಿ ನೀಡುವಂತೆ ಸೂಚಿಸಿ ಸಭೆಯಲ್ಲಿ ಹಾಜರಿದ್ದ ಎಲ್ಲಾ ವಿದ್ಯುತ್ ಗ್ರಾಹಕರಿಗೆ ಧನ್ಯವಾದಗಳನ್ನು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ತಮ್ಮ ವಿಶ್ವಾಸಿ

01/7/2020

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನಾ ಉಪ ವಿಭಾಗ
ಚಾ.ವಿ.ಸ.ನಿ.ನಿ., ಬೆಟ್ಟದಪುರ

ಪ್ರತಿಗಳು:-

1. ಮಾನ್ಯ ಅಧೀಕ್ಷಕ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನ ವೃತ್ತ ಚಾ.ವಿ.ಸ.ನಿ.ನಿ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾ.ವಿ.ಸ.ನಿ.ನಿ, ಕಾರ್ಯ ಮತ್ತು ಪಾಲನ ವಿಭಾಗ, ಕೆ.ಆರ್ ನಗರ ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಶಾಖಾಧಿಕಾರಿಗಳು ಕಾರ್ಯ ಮತ್ತು ಪಾಲನ ಶಾಖೆ ಚಾವಿಸನಿನಿ, ಬೆಟ್ಟದಪುರ/ ಕಿತ್ತೂರು/ ರಾವಂದೂರು/ ಕಣಗಾಲು/ ಸೀಗೂರು ರವರ ಮಾಹಿತಿಗಾಗಿ ಹಾಗೂ ಸಭೆಯಲ್ಲಿ ದಾಖಲಾದ ದೂರುಗಳನ್ನು ತ್ವರಿತವಾಗಿ ಸರಿಪಡಿಸಿ ಅನುಪಾಲನ ವರದಿಯನ್ನು ಸಲ್ಲಿಸಲು ಸೂಚಿಸಿದೆ.
4. ಕಛೇರಿ ಪ್ರತಿ.